ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಅಕ್ಟೋಬರ್ 8 ಮತ್ತು 9 ರಂದು ಪ್ಲಾನಿಂಗ್ ಕಮಿಷನ್‌ರವರು ಸಮಯ ಕೊಟ್ಟರು. ಇವರ ಒಳಜಗಳ ಅಥವಾ ಬೇರೆ ಕಾರಣಕ್ಕೋಸ್ಕರ ಅವತ್ತು ಹೋಗಲಿಲ್ಲ. ಅವಿಶ್ವಾಸ ನಿರ್ಣಯ ಮಂಡನೆ ಮಾಡಿರುವುದರಿಂದ, ಇವರು ಪ್ಲಾನಿಂಗ್ ಕಮಿಷನ್ ಅನ್ನು ರಿಕ್ವೆಸ್ಟ್ ಮಾಡಿಕೊಳ್ಳಬೇಕಾಗಿತ್ತು, ಇಲ್ಲಿ ಮಹತ್ವವಾದಂತಹ ಚರ್ಚೆಯಾಗುತ್ತಿದೆ, ನನ್ನ ಸಂಪುಟದ ಮೇಲಿನ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯಾಗುತ್ತಿದೆ, ಬೇರೆ ದಿನಾಂಕ ಕೊಡಿ ಎಂದು ಇವರು ಕೇಳಬೇಕಾಗಿತ್ತು. ಇದು ಎರಡನೆಯ ಬಾರಿ. ಮೂರನೆಯದು, ನಿನ್ನೆ ಪ್ಲಾನಿಂಗ್ ಕಮಿಷನ್ ಮೀಟಿಂಗ್‌ಗೆ ಹೋಗಿದ್ದಾರೆ.

ಶ್ರೀ ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪ ಮುಖ್ಯಮಂತ್ರಿಗಳು ಇನ್ನೇನು ಈಗ ಸದನಕ್ಕೆ ಬರುವವರಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಹಾಗದರೆ ಅವರು ಬರುವವರೆಗೆ ಸದನವನ್ನು ಮುಂದೂಡಿ. ಇವರ ಅನುಕೂಲಕ್ಕೆ ತಕ್ಕಂತೆ ಸದನ ನಡೆಯುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ಮಾನ್ಯ ಮುಖ್ಯಮಂತ್ರಿಗಳ ಮತ್ತು ಉಪ ಮುಖ್ಯಮಂತ್ರಿಗಳ ಎಲ್ಲಾ ಕಾರ್ಯಕ್ರಮಗಳ ಜವಾಬ್ದಾರಿ ನನ್ನದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ಸದನದ ಕಲಾಪಕ್ಕೆ ಸೀಮಿತವಾಗಿ ನಾವು ಮಾಡಿಕೊಂಡಿರತಕ್ಕಂತಹ ಒಪ್ಪಂದಕ್ಕೆ ಅನುಗುಣವಾಗಿ ನಿನ್ನೆ ಪ್ಲಾನಿಂಗ್ ಕಮಿಷನ್ ಮೀಟಿಂಗ್‌ಗೆ ಅವರು ಹೋಗಿದ್ದರು. ನಿನ್ನೆ 3 ಗಂಟೆಗೆ ಮೀಟಿಂಗ್ ಇತ್ತು. ಮಾನ್ಯ ಉಪ ಮುಖ್ಯಮಂತ್ರಿಗಳು ಬೆಂಗಳೂರಿಗೆ ಬಂದಿದ್ದಾರೆ. ಅವರು ಸದನಕ್ಕೆ ಬರುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಜೊತೆ ನಾನು ಮಾತನಾಡಿದೆ. ನಿನ್ನೆ ಕೂಡ ಅವರ ಆರೋಗ್ಯ ಸರಿ ಇರಲಿಲ್ಲ. ಇವತ್ತು ಡಾಕ್ಟರ್ ನನಗೆ ಪರ್ಮಿಷನ್ ಕೊಟ್ಟರೆ ನಾನು ಇವತ್ತೇ ರಾತ್ರಿ ಟ್ರಾವಲ್ ಮಾಡಿ ಬರುತ್ತೇನೆಂದು ಅವರು ನನಗೆ ಹೇಳಿದ್ದಾರೆ. ನಾನು ಅವರಿಗೆ ನಾನು ಬಹಳ ದಿವಸ ತಾಳುವುದಕ್ಕೆ ಆಗುವುದಿಲ್ಲ, ದಯಮಾಡಿ ಬೇಗ ಬರಬೇಕು ಎಂದು ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸತ್ಯಕ್ಕೆ ದೂರವಾದಂತಹ ಮಾತುಗಳನ್ನು ಅವರು ನಿಮಗೆ ಹೇಳಿದ್ದಾರೆ. ಅವರು ಅಲ್ಲಿ ರಾಜಕೀಯದಲ್ಲಿ ಮುಳುಗಿದ್ದಾರೆ. ಪ್ರಧಾನಿ, ಮಾಜಿ ಪ್ರಧಾನಿ, ಮತ್ತೊಬ್ಬರನ್ನು ಭೇಟಿ ಮಾಡಿ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರದಲ್ಲಿ ಅವರು ತೊಡಗಿದ್ದಾರೆ. ಅವರು ಇಲ್ಲಿಗೆ ಬರಲೇಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇರದೇ ಇರಲು ಕಾರಣವೇನು? ಈ ನಡವಳಿಕೆಯನ್ನು ಪ್ರತಿಭಟನೆ ಮಾಡಿ ನಾನು ವಾಕೌಟ್ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ನನಗೆ ಗೊತ್ತಿದ್ದ ವಿಚಾರ ನಾನು ತಿಳಿಸಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರೇ, ತಾವು ತಮ್ಮ ಭಾಷಣವನ್ನು ಮುಂದುವರೆಸಿ.